KACM010006292020

Presented on : 07-03-2020
Registered on : 07-03-2020

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by SHUBHA GOWDAR)**
**SPL.C/36/2020**

Complainant(PROSECUTION):
State by Excise Police, Chikkamagaluru, rep.by P.P. CKM

**VERSUS**

Accused:
1. Onkarappa/Onkara S/o Lt.Siddegowda, 50 yrs, Agri., R/at Machenahalli V, Lakya H, CKM
2:Mallikarjuna S/o Lt.Siddegowda, 45 yrs, Agri., R/at Machenahalli V,Lakya H CKM,

---------------------------------------------------------------------------

State Complainant}: Public Prosecutor, CKM,
Advocate for B.M. LAXMANA GOWDA. appearing for A-1 and 2.

---------------------------------------------------------------------------

**Offence punishable under : 13(1)(b),K.E.Act of KARNATAKA EXCISE ACT 1965,20(i),20(a),8(b),ofNDPS,Act of Narcotic Drugs and Psychotropic Substances (Amendment) Act, 2001,**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು**

**Spl.C. No: 36/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಸಂಗೀತ | ಪ್ರಾ.ಸಾ.- 01 |
| ಗಂಡನ ಹೆಸರು | ಃ | ಶಶಿಧರ್ | ಚಾ.ಸಾ.- 02 |
| ವಯಸ್ಸು | ಃ | 33 ವರ್ಷ | |
| ಉದ್ಯೋಗ | ಃ | ಗ್ರಾಮ ಲೆಕ್ಕಾಧಿಕಾರಿ, | |
| ವಾಸ ಸ್ಥಳ | ಃ | ರಾಮನಹಳ್ಳಿ | |

ದಿನಾಂಕಃ **19-10-2023**

**<u>ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಃ ಮುಖ್ಯ ವಿಚಾರಣೆಃ ಮಾನ್ಯ ಪಿ.ಪಿ. ಯವರಿಂದಃ</u>**

1. 2019 ನೇ ಇಸ್ವಿಯಿಂದ ಮಾಚೇನಹಳ್ಳಿ ವೃತ್ತದಲ್ಲಿ ಗ್ರಾಮ ಲೆಕ್ಕಾಧಿಕಾರಿ ಎಂದು ಕೆಲಸ ಮಾಡುತ್ತಿದ್ದೇನೆ. ಚಾಸಾ-1 ಪ್ರಕಾಶ್ ನನಗೆ ಗೊತ್ತು, ಮಾಚೇನಹಳ್ಳಿ ಗ್ರಾಮದ ಪಂಚಾಯ್ತಿಯಲ್ಲಿ ಬಿಲ್ ಕಲೆಕ್ಟರ್ ಎಂದು ಕೆಲಸ ಮಾಡುತ್ತಿದ್ದರು.

2. ಚಾಸಾ-3-ವಿಜಯ್, ಚಾಸಾ-4-ಉಮೇಶ್, ಚಾಸಾ-5-ಪ್ರವೀಣ್, ಚಾಸಾ-6-ಎಂ.ಆರ್.ಶೇಖರ್, ಚಾಸಾ-7-ಕೆ.ಎಂ.ತಮ್ಮಣ್ಣ ಇವರೆಲ್ಲಾ ಅಬಕಾರಿ ಇಲಾಖೆಯ ನೌಕರರೆಂದು ನನಗೆ ಗೊತ್ತು.

3. ದಿನಾಂಕಃ 09-09-2019 ರಂದು ಬೆಳಿಗ್ಗೆ 11.00 ಗಂಟೆಗೆ ಅಬಕಾರಿ ಇಲಾಖೆಯ ಅಧಿಕಾರಿಗಳು ಮಾಚೇನಹಳ್ಳಿ ಪಂಚಾಯ್ತಿಯ ಕಛೇರಿಗೆ ಬಂದಿದ್ದರು. ಮಲ್ಲಿಕಾರ್ಜುನ ಮತ್ತು ಓಂಕಾರಪ್ಪ ಅವರ ಮನೆಯ ಹಿಂಭಾಗ ಗಾಂಜಾ ಗಿಡ ಬೆಳೆದಿದ್ದಾರೆಂದು, ಮಹಜರ್ ಗೆಂದು ಜೊತೆಯಲ್ಲಿ ಬನ್ನಿ ಎಂದು ಅಬಕಾರಿ ಪೊಲೀಸರು ಈಗ ನಾನು ನೋಡುತ್ತಿರುವ ನೋಟೀಸನ್ನು ಕೊಟ್ಟರು. ಅದು ಇದೇ ಇರುತ್ತದೆ, ಈ ಸಹಿ ನನ್ನದೇ, ಪೊಲೀಸ್ ನೋಟೀಸನ್ನು ನಿ.ಪಿ. 1 ಎಂದು, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಚಾಸಾ-1 ಪ್ರಕಾಶ್ ಗೂ ಸಹಾ ನೋಟೀಸನ್ನು ಕೊಟ್ಟರು.

4. ಪಂಚಾಯ್ತಿ ಹತ್ತಿರ ನಮ್ಮೆಲ್ಲರ ತಪಾಸಣೆಯನ್ನು ಮತ್ತು ವಾಹನದ ತಪಾಸಣೆಯನ್ನು ಮಾಡಿದರು. ನಾವು 1.00 ಗಂಟೆಗೆ ಸ್ಥಳಕ್ಕೆ ಹೋದೆವು. ನಾವು ಸ್ಥಳಕ್ಕೆ ಹೋದಾಗ ಮಲ್ಲಿಕಾರ್ಜುನ ಮತ್ತು ಓಂಕಾರಪ್ಪ ಓಡಲು ಪ್ರಯತ್ನಪಟ್ಟರು, ಅವರನ್ನು ಅಬಕಾರಿ ಅಧಿಕಾರಿಗಳು ಹಿಡಿದರು. ಅವರ ಮನೆಯ ಹಿಂಭಾಗದಲ್ಲಿ ಹಿಡಿದದ್ದು. ಮನೆಯ ಹಿಂಭಾಗದಲ್ಲಿ ಗಾಂಜಾ ಗಿಡಗಳು ಇದ್ದವು, ಅದರ ಸುತ್ತಾ ಮುತ್ತಾ ಚೆಂಡು ಹೂವಿನ ಗಿಡಗಳು ಸಹಾ ಇದ್ದವು. ಅಲ್ಲಿ ಬೆಳೆದಿದ್ದ ಆ ಗಿಡಗಳನ್ನು ನೋಡಿ 8 ಗಾಂಜಾ

ಗಿಡಗಳು ಎಂದು ಅಬಕಾರಿ ಇಲಾಖೆಯ ಅಧಿಕಾರಿಗಳೇ ನಮಗೆ ತೋರಿಸಿದ್ದು.

5. ಆ 8 ಗಾಂಜಾ ಗಿಡಗಳನ್ನು ಪೊಲೀಸರು ಕಿತ್ತು ಹಾಕಿದರು. ಅವರು ತಂದಿದ್ದ ಮಿಷನ್ ನಿಂದ ತೂಕ ಮಾಡಲಾಗಿ, 17 ಕೆ.ಜಿ. 350 ಗ್ರಾಂ ತೂಕ ಬಂದಿತು. ಇದರ ಪೈಕಿ 5 ½ ಕೆ.ಜಿ.ಯನ್ನು ತೆಗೆದು ಪ್ರತ್ಯೇಕವಾದ ಚೀಲಗಳಲ್ಲಿ ಹಾಕಿ, ಉಳಿದಿದ್ದನ್ನು 2 ಚೀಲಗಳಲ್ಲಿ ಹಾಕಿದರು. ಆ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡುವಾಗ ಫೋಟೋಗಳನ್ನು ತೆಗೆದರು. ಮಧ್ಯಾಹ್ನ 1.00 ರಿಂದ 3.00 ಗಂಟೆಯವರೆಗೂ ಪೊಲೀಸರು ಮಹಜರನ್ನು ಮಾಡಿದರು. ಆ ಮಹಜರ್ ಇದೇ ಇರುತ್ತದೆ, ಇದರಲ್ಲಿರುವ ಒಂದು ಸಹಿ ತಮ್ಮದೆಂದು ಸಾಕ್ಷಿದಾರರು ಗುರುತಿಸಿರುತ್ತಾರೆ, ಮಹಜರನ್ನು ನಿ.ಪಿ. 2 ಎಂದು, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

6. ಈಗ ನಾನು ನೋಡುತ್ತಿರುವ ಫೋಟೋದಲ್ಲಿ ನಾನು ಮತ್ತು ಚಾಸಾ-1- ಪ್ರಕಾಶ್ ಇದ್ದೇವೆ, ಈ ಫೋಟೋವನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಗಾಂಜಾ ಗಿಡಗಳಿರುವ ಸ್ಥಳವನ್ನು ಆರೋಪಿ ಓಂಕಾರಪ್ಪ ಮತ್ತು ಮಲ್ಲಿಕಾರ್ಜುನ ತೋರಿಸಿದ್ದು.

7. (ಸೀಲ್ಡ್ ಆದ ಬಿಳಿ ಬಟ್ಟೆ ಚೀಲ ಇದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿ ಮಾನ್ಯ ಪಿ.ಪಿ. ಹಾಗೂ ಆರೋಪಿತರ ಪರ ವಕೀಲರಾದ ಶ್ರೀ ಬಿ.ಎಂ.ಎಲ್.ಜಿ. ವಕೀಲರ ಸಮಕ್ಷಮ ಅದನ್ನು ತೆರೆಯಲು ಅನುಮತಿ ನೀಡಲಾಗಿದೆ, ತೆರೆಯಲಾಗಿದೆ) ಅದರ ಒಳಗಿನ ಗಿಡಗಳನ್ನು (ಒಣಗಿದ ಕಡ್ಡಿಗಳ ತರಹ ಆಗಿದ್ದು ಇರುತ್ತದೆ) ತೋರಿಸಲಾಗಿ ಸಾಕ್ಷಿದಾರರು ಹಸಿ ಗಿಡಗಳನ್ನು ನೋಡಿದ್ದೆನು, ಇವು ಒಣಗಿವೆ, ಗೊತ್ತಾಗುತ್ತಿಲ್ಲ ಎಂದು ಹೇಳಿರುತ್ತಾರೆ.

8. ಈಗ ಸಾಕ್ಷಿದಾರರಿಗೆ 2 ಫೋಟೋಗಳನ್ನು ತೋರಿಸಲಾಗಿ, ಇದರಲ್ಲಿ ಕಾಣಿಸುತ್ತಿರುವ ಗಾಂಜಾ ಗಿಡಗಳನ್ನೇ ಆ ದಿನ ಪೊಲೀಸರು ಕಿತ್ತು ವಶಪಡಿಸಿಕೊಂಡಿದ್ದು ಎಂದು ಹೇಳಿರುತ್ತಾರೆ, ಆ 2 ಫೋಟೋಗಳನ್ನು ಕ್ರಮವಾಗಿ ನಿ.ಪಿ. 4 ಮತ್ತು 5 ಎಂದು

ಗುರುತಿಸಲಾಯಿತು. ಓಂಕಾರಪ್ಪ ಮತ್ತು ಮಲ್ಲಿಕಾರ್ಜುನ ಇವರನ್ನು ಪೊಲೀಸರು ಅಬಕಾರಿ ಕಛೇರಿಗೆ ಕರೆದುಕೊಂಡು ಹೋದರು, ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನೂ ಸಹಾ ತೆಗೆದುಕೊಂಡು ಹೋದರು. ಅಬಕಾರಿ ಅಧಿಕಾರಿಯು ನನ್ನ ಹೇಳಿಕೆಯನ್ನು ಬರೆದುಕೊಂಡರು.

9. ನ್ಯಾಯಾಲಯದ ಮುಂದೆ ಇರುವ ಇಬ್ಬರು ಆರೋಪಿಗಳೇ ಆ ದಿನ ನಾನು ನೋಡಿದ ಓಂಕಾರಪ್ಪ ಮತ್ತು ಮಲ್ಲಿಕಾರ್ಜುನ ಎಂದು ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಃ ಶ್ರೀ ಬಿ.ಎಂ.ಎಲ್.ಜಿ.ವಕೀಲರಿಂದಃ</u>**

10. ಗ್ರಾಮ ಲೆಕ್ಕಾಧಿಕಾರಿ ಎಂದು ಮೊದಲು ಹುದ್ದೆ ಇದ್ದು, ಈಗ ಅದನ್ನು ಗ್ರಾಮ ಆಡಳಿತ ಅಧಿಕಾರಿ ಹುದ್ದೆ ಎಂದು ಮಾಡಿರುತ್ತಾರೆ. ಮಾಚೇನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಂದು 4 ಗ್ರಾಮಗಳು ಬರುತ್ತವೆ. ಈ ಬಗ್ಗೆ ರಿಜಿಸ್ಟರ್ ಇರುತ್ತದೆ. ಈ ರಿಜಿಸ್ಟರ್ ಗಳಲ್ಲಿ ಆ ಗ್ರಾಮಗಳಲ್ಲಿ ಯಾರು, ಯಾರು ವಾಸ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಸಹಾ ನಮೂದು ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಜಮೀನುಗಳ ಬಗ್ಗೆ ಮಾತ್ರ ಇರುತ್ತದೆ ಎಂದು ಹೇಳಿರುತ್ತಾರೆ. ಜಮೀನುಗಳಲ್ಲಿ ಮನೆಗಳು ಇದ್ದರೆ, ಜಮೀನುಗಳ ಮತ್ತು ಇಂತಹ ಮನೆಗಳ ಕಂದಾಯವನ್ನು ವಸೂಲು ಮಾಡುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಜಮೀನುಗಳ ಕಂದಾಯವನ್ನು ಮಾತ್ರ ಮಾಡುತ್ತೇವೆಂದು ಮನೆಗಳ ಕಂದಾಯವನ್ನು ಪಂಚಾಯ್ತಿಯವರು ವಸೂಲು ಮಾಡುತ್ತಾರೆ ಎಂದು ಹೇಳಿರುತ್ತಾರೆ.

11. ಯಾವ ಅಸೆಸ್ ಮೆಂಟ್ ನಂಬರ್ ನಿಂದ ಆ ಇಬ್ಬರು ವ್ಯಕ್ತಿಗಳು ಓಡುತ್ತಿದ್ದರು ಎಂದು ಗೊತ್ತಿಲ್ಲ. ಆ ಇಬ್ಬರು ವ್ಯಕ್ತಿಗಳು ಆ ದಿನ ಯಾವ ಬಣ್ಣದ ಬಟ್ಟೆಗಳನ್ನು ಹಾಕಿಕೊಂಡಿದ್ದರು ಎಂದು ನೆನಪಿಲ್ಲ. ಆ ಮನೆ ಯಾರ ಹೆಸರಿನಲ್ಲಿ ಇದೆ ಎಂದು ಪರಿಶೀಲಿಸಿದಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಈ ಬಗ್ಗೆ ನನಗೇನು ಗೊತ್ತಿಲ್ಲ ಎಂದು ಹೇಳಿರುತ್ತಾರೆ. ಆ ಮನೆಯ ಹಿಂಭಾಗದಲ್ಲಿ ಒಂದು ಹಳ್ಳ

ಹರಿಯುತ್ತದೆ ಎನ್ನುವುದು ಸರಿ. ಈ ಹಳ್ಳ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಈ ಹಳ್ಳ ಸರ್ಕಾರಕ್ಕೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ.

12. ಮನೆಯಿಂದ ಎಷ್ಟು ದೂರದಲ್ಲಿ ಆ ಗಾಂಜಾ ಗಿಡಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಇದು ಗಾಂಜಾ ಗಿಡ, ಇದು ಚೆಂಡು ಹೂವಿನ ಗಿಡ ಎಂದು ಕಂಡು ಹಿಡಿಯಲು ನನಗೇನು ಗೊತ್ತಿರಲಿಲ್ಲ. ಅಬಕಾರಿ ಇಲಾಖೆಯವರು ಹೇಳಿದ್ದರಿಂದ ಅವು ಗಾಂಜಾ ಗಿಡಗಳೆಂದು ಹೇಳುತ್ತಿದ್ದೇನೆ ಎನ್ನುವುದು ಸರಿ. ಆ ಗಿಡಗಳಲ್ಲಿ ಮತ್ತೇನಿತ್ತು ಎಂದು ನೀವೇನು ಪರಿಶೀಲನೆ ಮಾಡಲಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಆ ಗಿಡಗಳ ಬಗ್ಗೆ ನನಗೇನು ಗೊತ್ತಿಲ್ಲ, ಅಬಕಾರಿ ಇಲಾಖೆಯವರು ಗೊತ್ತಿತ್ತು ಎಂದು ಹೇಳಿರುತ್ತಾರೆ.

13. ಆ ಗಿಡಗಳನ್ನು ಕಿತ್ತಾಗ ಅದಕ್ಕೆ ಮಣ್ಣು ಇತ್ತೋ, ಇರಲಿಲ್ಲವೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಬಹಳ ದಿನಗಳಾಗಿರುವುದರಿಂದ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ನಾನು ಮಹಜರನ್ನು ಓದಿಲ್ಲ ಎನ್ನುವುದು ಸರಿಯಲ್ಲ. ಆ ಜಾಗದ ದಕ್ಷಿಣ ದಿಕ್ಕಿಗೆ, ಮತ್ತು ಇತರ ದಿಕ್ಕುಗಳಿಗೆ ಏನೇನಿದೆ ಎಂದು ಈಗ ನೆನಪಿಲ್ಲ. ಗ್ರಾಮದ ಹಿರಿಯರನ್ನಾಗಲೀ, ಗೌರವಾನ್ವಿತ ವ್ಯಕ್ತಿಗಳನ್ನಾಗಲೀ ಕರೆದಿದ್ದರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನೆನಪಿಲ್ಲ ಎಂದು, ಬಹಳ ಜನ ಸೇರಿದ್ದರು ಎಂದು ಹೇಳಿರುತ್ತಾರೆ.

14. ಅಬಕಾರಿ ಇಲಾಖೆಯವರೇ ಮಹಜರ್ ಮಾಡಬೇಕೆಂದು ಆ ಫೋಟೋವನ್ನು ತೆಗೆದರು, ಫೋಟೋ ತೆಗೆದ ವ್ಯಕ್ತಿಯ ಹೆಸರು ಗೊತ್ತಿಲ್ಲ. ಸಹಿ ಮಾಡಿದ ನಂತರ ನಾನು ಕೆಲಸಕ್ಕೆ ಹೊರಟು ಹೋದೆನು. ನಂತರವೇನು ನಾನು ಅಬಕಾರಿ ಇಲಾಖೆಯ ಕಛೇರಿಗೆ ಹೋಗಿಲ್ಲ. ಆ ದಿನಕ್ಕಿಂತ ಮೊದಲು ಮಲ್ಲಿಕಾರ್ಜುನ ಮತ್ತು ಓಂಕಾರಪ್ಪನನ್ನು ನೋಡಿರಲಿಲ್ಲ, ಸಾಕ್ಷಿದಾರರು ಮುಂದುವರಿದು ಆ ದಿನಾಂಕಕ್ಕಿಂತ 3/4 ತಿಂಗಳ ಮೊದಲು ನಾನು ಮಾಚೇನಹಳ್ಳಿ ಗ್ರಾಮ ಪಂಚಾಯ್ತಿ ಲೆಕ್ಕಾಧಿಕಾರಿ ಎಂದು ಸೇರಿಕೊಂಡದ್ದು ಎಂದು ಹೇಳಿರುತ್ತಾರೆ.

15. ಆ ದಿನ ಅಬಕಾರಿ ಅಧಿಕಾರಿಗಳು ಗಾಂಜಾ ಗಿಡಗಳನ್ನು ವಶಪಡಿಸಿಕೊಳ್ಳಲೇ ಇಲ್ಲ ಎನ್ನುವುದು ಸರಿಯಲ್ಲ. ಅಬಕಾರಿ ಇಲಾಖೆಯ ಕಛೇರಿಯಲ್ಲಿ ನಾನು ಮಹಜರಿಗೆ ಸಹಿ ಮಾಡಿದೆನು, ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

**Sd/-19-10-2023**

**(ಶುಭ ಗೌಡರ್)**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಚಿಕ್ಕಮಗಳೂರು.**

ಸಾಕ್ಷಿ ಸಹಿಃ-

Visit **ecourts.gov.in** for updates or download mobile app “**eCourts Services**” from Android or iOS